# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಡಿ.ಟಿ.ಶ್ರೀನಿವಾಸ್ (ಡಿಟಿಎಸ್)
(ಶಿಕ್ಷಕರ ಕ್ಷೇತ್ರ)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 169

ಉತ್ತರಿಸಬೇಕಾದ ದಿನಾಂಕ : 10-12-2024

ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪ್ರವರ್ಗ-1 ರ ಅತೀ ಹಿಂದುಳಿದ ಜಾತಿಗಳಡಿ ಬರುವ ಅಲೆಮಾರಿ ಮತ್ತು ಅರೆ ಅಲೆಮಾರಿ ಜಾತಿಗಳ ಫಲಾನುಭವಿಗಳಿಗೆ ರಾಜ್ಯದ ಸಹಕಾರ ಸಂಘಗಳಲ್ಲಿ ಸಹಾಯಧನದ ವಂತಿಕೆ ನೀಡುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ; | ಹಿಂದುಳಿದ ಜಾತಿಗಳಡಿ ಬರುವ ಅಲೆಮಾರಿ ವರ್ಗದರನ್ನು ವಿವಿಧ ರೀತಿಯ ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೋಂದಾಯಿಸಲು ಅವರ ಪರವಾಗಿ ಸರ್ಕಾರದಿಂದ ಷೇರು ಸಹಾಯಧನವನ್ನು ನೀಡುವ ಯೋಜನೆಯು ಈಗಾಗಲೇ ಜಾರಿಯಲ್ಲಿರುತ್ತದೆ. |
| ಆ) | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಫಲಾನುಭವಿಗಳಿಗೆ ನೀಡುವ ಮಾದರಿಯಲ್ಲಿಯೇ ಹಿಂದುಳಿದ ಜಾತಿಗಳ ಅಲೆಮಾರಿ ಮತ್ತು ಅರೆ ಅಲೆಮಾರಿ ಫಲಾನುಭವಿಗಳಿಗೆ ಸಹಾಯಧನದ ವಂತಿಕೆ ನೀಡಲು ಇರುವ ತೊಂದರೆಗಳೇನು; ತೊಂದರೆಗಳನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ / ಹಿಂದುಳಿದ/ ಅಲ್ಪಸಂಖ್ಯಾತ/ಅಲೆಮಾರಿ ಜನಾಂಗದ ವರ್ಗದವರನ್ನು /ಮಹಿಳೆಯರನ್ನು/ವಿಕಲಚೇತನರನ್ನು ಎಲ್ಲಾ ವಿಧದ ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೋಂದಾಯಿಸಲು ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವವರನ್ನು ಸದಸ್ಯರನ್ನಾಗಿ ನೋಂದಾಯಿಸಲು ಸಹಾಯಧನ ಯೋಜನೆ (ರಾಜ್ಯ ಯೋಜನೆ) ಇದ್ದು, ಇದರಲ್ಲಿ ಹಿಂದುಳಿದ ಜಾತಿಗಳ ಅಲೆಮಾರಿ ಮತ್ತು ಅರೆ ಅಲೆಮಾರಿಗಳು ಸಹ ಫಲಾನುಭವಿಗಳಾಗಿರುತ್ತಾರೆ. |
| ಇ) | ಹಿರಿಯೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಇಲಾಖೆ ವತಿಯಿಂದ ಇದುವರೆಗೂ ಎಷ್ಟು ಫಲಾನುಭವಿಗಳಿಗೆ ಧನ ಸಹಾಯ ಮಾಡಲಾಗಿದೆ; (ಪಟ್ಟಿಯೊಂದಿಗೆ ವಿವರ ನೀಡುವುದು) ಇದುವರೆವಿಗೂ ಧನ ಸಹಾಯ ಮಾಡಿದ ಫಲಾನುಭವಿಗಳು ಮರು ಪಾವತಿ ಮಾಡಿದ್ದಾರೆಯೇ ಮಾಡದಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಹಿರಿಯೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಇದುವರೆವಿಗೂ ಹಿಂದುಳಿದ ಜಾತಿಗಳ ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗದವರನ್ನು ಸರ್ಕಾರದ ಷೇರು ಸಹಾಯಧನವನ್ನು ಮಂಜೂರು ಮಾಡಿ ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೋಂದಾಯಿಸುವ ಯೋಜನೆಯಲ್ಲಿ ಯಾವುದೇ ಪ್ರಸ್ತಾವನೆಗಳು ಸ್ವೀಕೃತವಾಗಿರುವುದಿಲ್ಲ. |

| | | |
|---|---|---|
| ಈ) | ಸಹಕಾರ ಇಲಾಖೆಯಿಂದ ಹಿರಿಯೂರು ವಿಧಾನಸಭಾ ಕ್ಷೇತ್ರದಲ್ಲಿ ಭ್ರಷ್ಟಾಚಾರ ನಡೆದಿದೆಯೇ; ಹಾಗಿದ್ದರೆ ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು? | ಸಹಕಾರ ಇಲಾಖೆಯಿಂದ ಹಿರಿಯೂರು ವಿಧಾನಸಭಾ ಕ್ಷೇತ್ರದಲ್ಲಿ ಭ್ರಷ್ಟಾಚಾರ ನಡೆದಿರುವುದಿಲ್ಲ. ಆದರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಜವಗೊಂಡನಹಳ್ಳಿ ಈ ಸಂಘದ ಮಾಜಿ ಕಾರ್ಯದರ್ಶಿಯವರಿಂದ ರೂ.32.82 ಲಕ್ಷ ಮೊತ್ತದ ಹಣದುರುಪಯೋಗ ಪ್ರಕರಣವು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ–1959 ರ ಕಲಂ 65 ರನ್ವಯ ಪರಿವೀಕ್ಷಣೆ ನಡೆಸಿ ಸಲ್ಲಿಸಿದ ವರದಿಯಿಂದ ಕಂಡುಬಂದಿರುತ್ತದೆ. ಈ ಬಗ್ಗೆ ಸಂಬಂಧಪಟ್ಟವರ ವಿರುದ್ದ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 69, ಕಲಂ 103 ಮತ್ತು ಕಲಂ 28ಬಿ ರಡಿ ಕ್ರಮ ಕೈಗೊಂಡು ನ್ಯೂನ್ಯತೆಗಳನ್ನು ಸರಿಪಡಿಸಿ ಅನುಪಾಲನಾ ವರದಿ ಸಲ್ಲಿಸಲು ಸಂಘಕ್ಕೆ ಕಲಂ 68 ರಡಿ ನಿರ್ದೇಶಿಸಿ ಆದೇಶ ನೀಡಲಾಗಿದೆ. |

**ಸಂಖ್ಯೆ: ಸಿಒ 274 ಸಿಎಲ್‌ಎಸ್ 2024**

K. N. Rajanna

**(ಕೆ.ಎನ್. ರಾಜಣ್ಣ)**
**ಸಹಕಾರ ಸಚಿವರು**